ಚಂದನವ ಕಡಿದು ಕೊರೆದು ತೇದಡೆ ನೊಂದನೆಂದು ಕಂಪ ಬಿಟ್ಟಿತ್ತೆ?
ತಂದು ಸುವರ್ಣ ಕಡಿದೊಗೆದೊಡೆ ಬೆಂದು ಕಳಂಕ ಹಿಡಿದಿತ್ತೆ?
ಕಬ್ಬುನವ ಗಾಣದಲಿಕ್ಕೆ ಬೆಂದು ಪಾರಾಗುಳ್ಳ ಸಕ್ಕರೆಯಾಗಿ
ನೊಂದನೆಂದು ಸವಿಯ ಬಿಟ್ಟಿತ್ತೆ?

ನನಗೆ ದೇಹ ವ್ಯಾಮೋಹ ಅಳಿದುಹೋಗಿದೆ. ನೀವು ಯಾವುದನ್ನು ದೇಹಸುಖ ಎಂದು ಕರೆಯುತ್ತಿರೋ ಅದು ನನಗೊಂದು ಹಿಂಸೆಯಾಗಿ ಬಿಟ್ಟಿದೆ. ಅದೇ ನನ್ನ ಗುಣ. ಆದರೆ ನೀವು ನನ್ನಂತಾಗಬೇಕೆಂದು ನಾನು ಬಯಸುವುದಿಲ್ಲ. ನನ್ನಿಂದ ಕೊಡಲಾಗದುದನ್ನು ನೀವು ಬೇರೆಯವರಿಂದ ಪಡೆಯುವುದನ್ನು ನಾನು ಆಕ್ಷೇಪಿಸುವುದಿಲ್ಲ. ಯಾವುದೇ ಅಭ್ಯಂತರ ಹೇಳಿ ನಿಮ್ಮ ಸುಖಕ್ಕೆ ನಾನು ಅಡ್ಡಿಯಾಗುವುದಿಲ್ಲ. ನನ್ನ ಸ್ವಭಾವವನ್ನು ಬದಲಾಯಿಸುವ ವ್ಯರ್ಥ ಪ್ರಯತ್ನ ಮಾಡಿದರೆ ನಿಮಗೇ ನಿರಾಶೆಯಾಗಲಿದೆ.

ಎರದ ಮುಳ್ಳಿನಂತೆ ಪರಗಂಡರೆನಗವ್ವಾ ಸೋಂಕಲಮ್ಮೆ ಸುಳಿಯಲಮ್ಮೆ
ನಂದಿ ನೆಚ್ಚಿ ಮಾತಾಡಲಂಬೆನವ್ವಾ ಚನ್ನ ಮಲ್ಲಿಕಾರ್ಜುನನಿಲ್ಲದ ಗಂಡನ ಉರದಲ್ಲಿ
ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ."

ಅಪ್ಪಾಜಿರಾಜ ಹಿಮಗಡ್ಡೆಯಾಗಿ ಬಿಟ್ಟ. ಮರು ದಿನದಿಂದ ಅವನು ಕಾವೇರಿಯ ಮನೆಯಲ್ಲಿ ಹೆಚ್ಚು ಸಮಯ ಕಳೆಯತೊಡಗಿದ. ಆದರೂ ಕಾವೇರಿಯ ಗರ್ಭದಲ್ಲಿ ಅವನು ಪಡಿ ಮೂಡಲಿಲ್ಲ. ಮೂಡುತ್ತಿದ್ದರೆ ನೀಲಾಂಬಿಕಾದೇವಿಯ ಗರ್ಭದಲ್ಲಿ ಜನಿಸಿದ ಚಿಕ್ಕವೀರಪ್ಪನಿಗೆ ಒಬ್ಬ ಎದುರಾಳಿ ಹುಟ್ಟಿದಂತಾಗುತ್ತಿತ್ತು. ಆಗುತ್ತಿರುವುದೆಲ್ಲಾ ಒಳ್ಳೆಯದಕ್ಕೇ ಎಂದುಕೊಂಡು ಅಪ್ಪಾಜಿರಾಜ ನೆಮ್ಮದಿಯಿಂದಿದ್ದ.

ನೆಮ್ಮದಿಯಿಂದಿರಲು ಸಾಧ್ಯವಾಗದ್ದು ಕಾವೇರಿಗೆ ಮಾತ್ರ. ತನ್ನ ಗರ್ಭದಲ್ಲಿ ಅಪ್ಪಾಜಿ ರಾಜ ಪಡಿ ಮೂಡದಾಗ ಅವಳಲ್ಲಿ ಅಸ್ಥಿರತೆಯ ಭಾವ ಮೂಡಿತು. ದಿನದಿಂದ ದಿನಕ್ಕೆ ಅದು ಹೆಚ್ಚಾಗುತ್ತಾ ಹೋಯಿತು. ಒಂದು ದಿನ ಅಪ್ಪಾಜಿ ರಾಜನ ತೋಳ ತೆಕ್ಕೆಯಲ್ಲಿ ಬಂದಿಯಾಗಿದ್ದಾಗ ಅವಳು ಜೇನದನಿಯಲ್ಲಿ ಉಲಿದಳು.

"ಒಡೆಯರಲ್ಲಿ ಅಂತರಂಗವನ್ನು ತೋಡಿಕೊಳ್ಳಬೇಕೆಂದಿದ್ದೇನೆ. ತಪ್ಪು ತಿಳಿಯಬಾರದು."

"ನಿನ್ನ ಯಾವ ಮಾತನ್ನು ನಾನು ತಪ್ಪು ತಿಳಿದಿದ್ದೇನೆ?"

"ಅದು ಒಡೆಯರ ದೊಡ್ಡ ಗುಣ. ಆದರೂ ಒಡೆಯರು ತಪ್ಪು ತಿಳಿಯಬಹುದೇನೋ ಎಂಬ ಆತಂಕ. ನಿಮ್ಮಲ್ಲಿ ಪ್ರೀತಿ ಮೂಡಿದ ಆರಂಭದ ವರ್ಷಗಳಲ್ಲಿ ನಾನು ನಾಳೆಗಳ ಬಗ್ಗೆ ಚಿಂತಿಸಿದವಳಲ್ಲ. ಈಗ ಯೌವನ ಜಾರುತ್ತಿದೆ, ಕೊರತೆ ಕಾಡುತ್ತಿದೆ. ನಿಮ್ಮ ಪಟ್ಟದ ರಾಣಿ ನೀಲಾಂಬಿಕಾದೇವಿ ಕೊಡಗಿಗೆ ಒಬ್ಬ ಉತ್ತರಾಧಿಕಾರಿಯನ್ನು ನೀಡಿ ಜನ್ಮಸಾರ್ಥಕ ಪಡಿಸಿಕೊಂಡಳು. ಈ ಕಾವೇರಿಯ ಬಾಳಿನಲ್ಲಿ ಯಾವ ಸಾರ್ಥಕತೆ ಇದೆ ಪ್ರಭೂ?"

"ನಾನು ನೀಲಾಂಬಿಕಾ ದೇವಿಯ ಮೈಯನ್ನು ಮುಟ್ಟದೆ ಎಷ್ಟೋ ಸಮಯವಾಯಿತು. ಈಗ ಸಂಪೂರ್ಣವಾಗಿ ನಿನ್ನವನಾಗಿಯೇ ಇದ್ದೇನಲ್ಲಾ? ಇನ್ನೇನಾಗಬೇಕು ನಿನಗೆ?"

"ಈಗೇನೋ ಹೌದು ದೊರೆ. ಮುಂದೇನು? ನಿಮಗೇನಾದರೂ ಆದರೆ ನಾನು ಬದುಕುವುದು ಹೇಗೆ? ವೃದ್ಧಾಪ್ಯದಲ್ಲಿ ನನಗೆ ನನ್ನವರೆಂಬವರು ಯಾರಿರುತ್ತಾರೆ. ಅಲ್ಲದೆ ಜನರು ನನ್ನನ್ನು ಕರೆಯುತ್ತಿರುವುದು ಹೇಗೆ? ಅಪ್ಪಾಜಿರಾಜರು ಇಟ್ಟುಕೊಂಡವಳು! ಈ ಹೆಸರನ್ನು ತಪ್ಪಿಸುತ್ತೀರಾ ದೊರೆ?"